# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 887 |
| ವಿಧಾನ ಸಭೆ ಸದಸ್ಯರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾದಲ್ಲಿನ ಪಶುಸಂಗೋಪನಾ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡಿವೆಯೇ; | ಇಲ್ಲ. |
| ಆ) | ಪ್ರಾರಂಭಗೊಳ್ಳದಿದ್ದಲ್ಲಿ ಯಾವ ಶೈಕ್ಷಣಿಕ ವರ್ಷದಿಂದ ಸದರಿ ಕಾಲೇಜಿನಲ್ಲಿ ತರಗತಿಗಳನ್ನು ಪ್ರಾರಂಭಿಸಲಾಗುವುದು; | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೋಯ್ಲಾ ಗ್ರಾಮದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯಕ್ಕೆ ಬೋಧನಾ ಚಟುವಟಿಕೆಗಳಿಗೆ ಅವಶ್ಯವಿರುವ 42 ಬೋಧಕ ಮತ್ತು 64 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಕಡಬದ ಪಶುವೈದ್ಯಕೀಯ ಮಹಾವಿದ್ಯಾಲಯದ ಮೊದಲ ಹಂತದ ಕಾಮಗಾರಿಗಳು ಕರ್ನಾಟಕ ಗೃಹ ಮಂಡಳಿ ಬೆಂಗಳೂರು ಇವರಿಂದ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಗೊಂಡ ನಂತರ ಭಾರತೀಯ ಪಶುವೈದ್ಯಕೀಯ ಪರಿಷತ್ತನ್ನು ಸದರಿ ಮಹಾವಿದ್ಯಾಲಯದ ಪರಿ ವೀಕ್ಷಣೆಗೆ ಕೋರಲಾಗುವುದು. ತದನಂತರ ನಿಯೋಜಿಸಲಾಗುವ ತಜ್ಞರ ತಂಡ ಸದರಿ ಮಹಾವಿದ್ಯಾಲಯಕ್ಕೆ ಭೇಟಿ ನೀಡಿ ಅನುಮತಿ ನೀಡಿದ ನಂತರ ಮಹಾವಿದ್ಯಾಲಯ ಪ್ರಾರಂಭಿಸಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗುವುದು. |
| ಇ) | ಸದರಿ ಕಾಲೇಜಿಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಕಲ್ಪಸಲಾಗಿದೆಯೇ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೋಯ್ಲಾ ಗ್ರಾಮದಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ ಪ್ರಾರಂಭಿಸಲು ಮಹಾವಿದ್ಯಾಲಯದ ಪ್ರಥಮ ಹಂತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ. ಇದಕ್ಕನುಗುಣವಾಗಿ ಕರ್ನಾಟಕ ಗೃಹ ಮಂಡಳಿಯು ಮೊದಲನೇ ಹಂತದಲ್ಲಿ ಮಹಾವಿದ್ಯಾಲಯದ |

| | | |
|---|---|---|
| | | ಕಾಲೇಜು ಕಟ್ಟಡ, ಆಸ್ಪತ್ರೆ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಅತಿಥಿ ಗೃಹದ ನಿರ್ಮಾಣಗಳನ್ನು ಕೈಗೊಳ್ಳಲಾಗಿದ್ದು, ಅವುಗಳು ಮುಗಿಯುವ ಹಂತದಲ್ಲಿವೆ. ನೀರು ಸರಬರಾಜು, ವಿದ್ಯುತ್ ಸಂಪರ್ಕ ಹಾಗೂ ಒಳಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎರಡನೇ ಹಂತದ ಕಾಮಗಾರಿಗಳಾದ ಒಳರಸ್ತೆ, ಕುಡಿಯುವ ನೀರಿನ ಯೋಜನೆ, ನೈರ್ಮಲೀಕರಣ ತೊಟ್ಟಿಗಳು, ಅಡ್ಡಗೋಡೆಗಳು, ಜಾನುವಾರು ಸಂಕೀರ್ಣಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. |
| ಈ) | ದೇಶೀಯ ಗೋ ತಳಿಗಳ ಅಭಿವೃದ್ಧಿಗೆ ಸ್ಥಳೀಯವಾಗಿ ಯಾವ ಯಾವ ಜಿಲ್ಲೆಗಳಲ್ಲಿ ತಳಿ ಸಂವರ್ಧನಾ ಕೇಂದ್ರಗಳನ್ನು ತೆರೆಯಲಾಗಿದೆ ಹಾಗೂ ಸದರಿ ಕೇಂದ್ರಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳೇನು? | ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಈ ಕೆಳಕಂಡಂತಹ ಕೇಂದ್ರಗಳಲ್ಲಿ ದೇಶಿ ಗೋತಳಿ ಸಂವರ್ಧನೆ ಕೇಂದ್ರಗಳನ್ನು ತೆರೆಯಲಾಗಿದೆ.<br>1. ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ, ಧೇವಣಿ, ಹಾಲಹಳ್ಳಿ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ.<br>2. ಜಾನುವಾರು ಸಂಶೋಧನಾ ಹಾಗೂ ಮಾಹಿತಿ ಕೇಂದ್ರ (ಅಮೃತ ಮಹಲ್) ಕೊನೆಹಳ್ಳಿ, ತಿಪಟೂರು ತಾಲ್ಲೂಕು ತುಮಕೂರು ಜಿಲ್ಲೆ.<br><br>**ದೇವಣಿ ಸಂಶೋಧನಾ ಹಾಗೂ ಮಾಹಿತಿ ಕೇಂದ್ರದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು:-**<br><br>1. ದೇಶಿ ಗೋತಳಿಯಾದ ದೇವಣಿ ಜಾನುವಾರುಗಳ ಸಂವರ್ಧನೆ ಮತ್ತು ಸಂರಕ್ಷಣೆ. ಇಲ್ಲಿ 50 ದೇವಣಿ ಆಕಳುಗಳನ್ನು ಸಾಕಲಾಗಿದ್ದು, ಇವುಗಳಿಂದ ಹುಟ್ಟುವ ಕರುಗಳನ್ನು ರೈತರಿಗೆ ಹರಾಜು ಮೂಲಕ ವಿತರಿಸಲಾಗುತ್ತಿದ್ದು, ಹಲವಾರು ವರ್ಷಗಳಿಂದ ಇವುಗಳ ಸಂರಕ್ಷಣೆ ಮಾಡಲಾಗುತ್ತಿದೆ.<br>2. ಸಂಶೋಧನೆಯ ಮೂಲಕ ಬೀದರ ಜಿಲ್ಲೆಯಲ್ಲಿ 500 ಶುದ್ಧ ದೇವಣಿ ತಳಿಗಳನ್ನು ಗುರುತಿಸಿ ಅವುಗಳ ಉತ್ಪಾದನಾ ಹಾಗೂ ಇನ್ನಿತರೆ ಕ್ಷಮತೆ ಲಕ್ಷಣಗಳನ್ನು ದಾಖಲಿಸಲಾಗಿದೆ.<br>3. ಈ ಕೇಂದ್ರದಲ್ಲಿ ಮಾದರಿ ದೇವಣಿ ಫಾರಂನ್ನು ಸ್ಥಾಪಿಸಿದ್ದು ಬಂಧಮುಕ್ತ ಮಾದರಿಯಲ್ಲಿ ಆಕಳುಗಳನ್ನು ಇಡಲಾಗಿದೆ.<br>4. ರೈತರ ಮಾಹಿತಿಗಾಗಿ ವಿವಿಧ ತಳಿ ಮೇವು ಗಿಡಗಳ |

| | | |
|---|---|---|
| | | ಮಾದರಿ ಪ್ರಾತ್ಯಕ್ಷತೆಯನ್ನು (ಮ್ಯೂಸಿಯಂ) ಸ್ಥಾಪಿಸಲಾಗಿದೆ.<br>5. ಗೋ ಉತ್ಪನ್ನಗಳಿಂದ ಆಧಾಯ ಬರುವಂತೆ "ಎರೆಹುಳು ಘಟಕವನ್ನು" ಸ್ಥಾಪಿಸಿದ್ದು, ರೈತರಿಗೆ ಇದರ ಪ್ರಾತ್ಯಕ್ಷತೆಯೊಂದಿಗೆ ಮಾರಾಟದ ವ್ಯವಸ್ಥೆಯನ್ನು ಮಾಡಲಾಗಿದೆ.<br>6. ಪ್ರತಿ ವರ್ಷ ರೈತರಿಗೆ ಹೈನುಗಾರಿಕೆ, ಜಾನುವಾರು ಆರೋಗ್ಯ ಮತ್ತು ಮೇವು ಉತ್ಪಾದನೆ, ಗೋ ಉತ್ಪನ್ನಗಳ ಕುರಿತಂತೆ ಹಲವಾರು ದಿನಗಳ ಉಚಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br>7. ಬೆಂಗಳೂರು, ಶಿವಮೊಗ್ಗ, ಹಾಸನ ,ಗದಗ ಮತ್ತು ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯಗಳಿಂದ ನಿಯೋಜಿಸಲ್ಪಡುವ ಇಂಟರ್ನ್‌ಷಿಪ್-ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ತಂಡಗಳನ್ನು ರಚಿಸಿ ವೈಜ್ಞಾನಿಕ ತರಬೇತಿ ನೀಡಲಾಗುತ್ತಿದೆ.<br>8. ಬೀದರ ಪಶುವೈದ್ಯಕೀಯ ಮಹಾವಿದ್ಯಾಲಯ ಸ್ನಾತಕೋತ್ತರ ವಿದ್ಯಾರ್ಥಿಗಳ ಸಂಶೋಧನೆ ಹಾಗೂ ಪ್ರಬಂಧ ರಚನೆಗೆ ಸಹಾಯವಾಗುತ್ತಿದೆ.<br>9. ರೈತರ ಕೋರಿಕೆ ಮೇರೆಗೆ ಪ್ರತಿ ವರ್ಷ ಸೂಪರ್ ನೇಪಿಯರ್ ಮೇವಿನ ಸಸಿಗಳು, ಅನೇಕ ರೀತಿಯ ಮೇವಿನ ತಳಿಯ ಬೀಜಗಳನ್ನು, ಕೊಟ್ಟಿಗೆ ಗೊಬ್ಬರವನ್ನು ಒದಗಿಸಲಾಗುತ್ತಿದೆ.<br>**ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ, (ಅಮೃತ ಮಹಲ್) ಕೋನೆಹಳ್ಳಿ, ತಿಪಟೂರು, ತುಮಕೂರು ಜಿಲ್ಲೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು:-**<br>1. ಅಮೃತ ಮಹಲ್ ದೇಶಿ ಗೋತಳಿಗಳ ಸಂರಕ್ಷಣೆಗೆ ಸುಮಾರು 77 ಅಮೃತ ಮಹಲ್ ರಾಸುಗಳನ್ನು ಇಲ್ಲಿ ಸಂರಕ್ಷಿಸಲಾಗಿದೆ. ಅವುಗಳಿಗೆ ಜನಿಸುವ ಕರುಗಳನ್ನು ರೈತರಿಗೆ ಹರಾಜು ಮೂಲಕ ಒದಗಿಸಲಾಗುತ್ತಿದೆ.<br>2. ರೈತರಿಗೆ ವೈಜ್ಞಾನಿಕ ಹೈನುಗಾರಿಕೆ, ಪಶುಪಾಲನೆ ಕುರಿತಂತೆ ಅನೇಕ ತರಬೇತಿ ಕಾರ್ಯಕ್ರಮಗಳ ಆಯೋಜನೆ ಮಾಡಲಾಗುತ್ತಿದೆ.<br>3. ರೈತರಿಗೆ ಮೇವಿನ ಸಸಿಗಳ ಮಾರಾಟ, ಮೇವಿನ ಬೀಜ, ರಾಗಿ ಹುಲ್ಲು, ರಾಗಿಯ ಮಾರಾಟ, ಕೊಟ್ಟಿಗೆ |

| | | |
|---|---|---|
| | | ಗೊಬ್ಬರದ ಮಾರಾಟ ಮಾಡಲಾಗುತ್ತಿದೆ.<br>4. ಪಶುಸಂಗೋಪನಾ, ಪಾಲಿಟೆಕ್ನಿಕ್, ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಬೋಧನೆಯನ್ನು ಈ ಕೇಂದ್ರದಲ್ಲಿ ನೀಡಲಾಗುತ್ತಿದೆ.<br>ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ದೇಶೀಯ ಗೋತಳಿಗಳ ಅಭಿವೃದ್ಧಿಗೆ ತೆರೆಯಲಾದ ತಳಿ ಸಂವರ್ಧನಾ ಕೇಂದ್ರಗಳ ವಿವರ ಮತ್ತು ಕಾರ್ಯಕ್ರಮಗಳ ವಿವರವನ್ನು **ಅನುಬಂಧದಲ್ಲಿ** ನೀಡಲಾಗಿದೆ. |

**ಸಂಖ್ಯೆ: ಪಸಂಮೀ ಇ-266 ಪಅಸೇ 2022**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**

| | ಅನುಬಂಧ – 1 | | | LCA-873(887) |
|---|---|---|---|---|
| ಕ್ರ. ಸಂ. | ಜಿಲ್ಲೆ | ತಳಿ | ಕ್ಷೇತ್ರದ ಹೆಸರು | ಕೈಗೊಂಡಿರುವ ಕಾರ್ಯಕ್ರಮಗಳು |
| 1 | ಚಿಕ್ಕಮಗಳೂರು | ಅಮೃತ್ ಮಹಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಅಜ್ಜಂಪುರ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ. | 1. ಅಮೃತ್ ಮಹಲ್‌ನ ಐತಿಹಾಸಿಕ ಜಾನುವಾರು ತಳಿಯನ್ನು ಸಂರಕ್ಷಿಸಿ ಸಂವರ್ಧನ ಮಾಡಲಾಗುತ್ತಿದೆ.<br><br>2.ಅಮೃತ್ ಮಹಲ್ ಜಾನುವಾರು ತಳಿಯ ಶುದ್ಧತೆಯನ್ನು ಕಾಪಾಡಿಕೊಳ್ಳಲಾಗುತ್ತಿದೆ.<br><br>3. ಹರಾಜಿನ ಮೂಲಕ ರೈತರಿಗೆ ಶುದ್ಧ ಅಮೃತ್ ಮಹಲ್ ಹೋರಿ ಕರುಗಳನ್ನು ಒದಗಿಸುವುದು ಮತ್ತು ಘನೀಕೃತ ವೀರ್ಯ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟ ಅಮೃತ್ ಮಹಲ್ ಹೋರಿ ಕರುಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ.<br><br>4. ಅಮೃತಮಹಲ್ ಕಾವಲುಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ. |
| 2 | ಚಿತ್ರದುರ್ಗ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಮಗಿರಿ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಚಿಕ್ಕ ಎಮ್ಮಿಗನೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಕೈನೋಡು. | |
| 3 | ಹಾಸನ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹಬ್ಬನಘಟ್ಟ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿದರೆ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಗಾಯಸಂದ್ರ. | |
| 4 | ತುಮಕೂರು | ಹಳ್ಳಿಕಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುಣಿಕೇನಹಳ್ಳಿ ಹಾಗೂ ಹುಲ್ಲೇನಹಳ್ಳಿ | ಹಳ್ಳಿಕಾರ್ ತಳಿ ಸಂವರ್ಧನೆ ಮತ್ತು ಸಂರಕ್ಷಣೆ ಮಾಡಲಾಗುತ್ತಿದೆ. ಉತ್ಕೃಷ್ಟ ಹೋರಿಕರುಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |
| 5 | ಹಾವೇರಿ | ಖಿಲಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಬಂಕಾಪುರ. | ಖಿಲಾರ್ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ಮೇವು ಅಭಿವೃದ್ಧಿ ಪಡಿಸಿ ರೈತರಿಗೆ ಮೇವು ಬೆಳೆ ಬೇರುಗಳನ್ನು ನೀಡಲಾಗುತ್ತಿದೆ. ಪಶುಪಾಲನಾ ಚಟುವಟಿಕೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |
| 6 | ದಕ್ಷಿಣ ಕನ್ನಡ | ಮಲೆನಾಡುಗಿಡ್ಡ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ. | ಮಲೆನಾಡು ಗಿಡ್ಡ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |

<table>
<tr><td rowspan="2">7</td><td rowspan="2">ಬಳ್ಳಾರಿ</td><td>ದೇವಣಿ</td><td rowspan="2">ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರಿಕುಪ್ಪ.</td><td rowspan="4">ಇತರೆ ರಾಜ್ಯಗಳ ದೇಸೀ ತಳಿಗಳಾದ ದೇವಣಿ, ಗಿರ್, ಸಾಹಿವಾಲ್, ಓಂಗೋಲ್ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. 2021-22ನೇ ಸಾಲಿನಲ್ಲಿ ಗೋ ಸಂಕುಲ ಸಂಮೃದ್ಧಿ ಯೋಜನೆ ಅಡಿಯಲ್ಲಿ ಆರಂಭಿಸಲಾಗಿದೆ.</td></tr>
<tr><td>ಓಂಗೋಲ್</td></tr>
<tr><td>8</td><td>ಚಾಮರಾಜನಗರ</td><td>ಗಿರ್</td><td>ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ, ಬರಗಿ.</td></tr>
<tr><td>9</td><td>ಕೊಡಗು</td><td>ಸಾಹಿವಾಲ್</td><td>ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ.</td></tr>
<tr><td>10</td><td>ಧಾರವಾಡ</td><td>ಕೃಷ್ಣಾವ್ಯಾಲಿ</td><td>ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ತೇಗೂರು.</td><td>ಕೃಷ್ಣಾವ್ಯಾಲಿ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ.</td></tr>
</table>

ನಿರ್ದೇಶಕರು